ಶ್ರೀ ಎಚ್. ಜಿ. ಗೋವಿಂದೇಗೌಡ.—ಸನ್ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯ ಉಪ-ನಿರ್ದೇಶಕರ ವರದಿಯ ಪ್ರಕಾರ ಹಿರಿಯ ಪ್ರಾಥಮಿಕ ಶಾಲೆಗೆ ಇಬ್ಬರು ಶಿಕ್ಷಕರಾದ ಶ್ರೀಮತಿ ವೇನಕ ವಂತ್ತು ರಂಗ ಎಂಬುವವರು ಸರಿಯಾಗಿ ಶಾಲೆಗೆ ಬರುತ್ತಿರಲಿಲ್ಲ. ಎಂದು ಸಾರ್ವಜನಿಕರಿಂದ ದೂರುಗಳು ಬಂದಿದ್ದವು. ಹಾಗೂ ಅಲ್ಲಿನ ಮುಖ್ಯೋಪಾಧ್ಯಾಯರು ಶಾಲಾ ಮಕ್ಕಳಿಗೆ ಹಂಚುತ್ತಿದ್ದ ಪಠ್ಯಪುಸ್ತಕಗಳನ್ನು ಮುಖಪುಟದ ಜೆಲಿಗೆ ಮಾರಾಟ ಮಾಡಿ ಹಣವನ್ನು ವಸೂಲು ಮಾಡಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿದ್ದವು. ಆದ್ದರಿಂದ ಈ ಮೂರು ಜನ ಶಿಕ್ಷಕರನ್ನು ಇಲಾಖೆಯ ವಿಚಾರಣೆಗೆ ಆಜ್ಞೆ ಮಾಡಿ ಅವರನ್ನು ಅಮಾನತ್ತಿನಲ್ಲಿ ಇಡಲಾಗಿದೆ. ಆ ಮೂರು ಜನ ಶಿಕ್ಷಕರ ಬದಲಿಗೆ ಬೇರೆಯವರನ್ನು ಡೆಪ್ಯೂಟ್ ಮಾಡಲಾಗಿದೆ.

XIV ಸಾರಾಯಿಯನ್ನು ಸೀಸೆಗಳಲ್ಲಿ ಮಾರಾಟ ಮಾಡದೆ ಚಿಲ್ಲರೆಯಾಗಿ ಮಾರಾಟ ಮಾಡುವುದು

ಶ್ರೀ ಬಿ. ಸ್ವಾಮಿರಾವ್.— ಮಾನ್ಯ ಅಧ್ಯಕ್ಷರೇ, ಇವರ ಆಜ್ಞೆಯ ಪ್ರಕಾರ ಸೀಸೆಗಳಲ್ಲಿ ನಾವು ಸಾರಾಯಿಯನ್ನು ತುಂಬಿ ಕೊಡುತ್ತೇವೆಂದು ಇವರು ಹೇಳಿದರೂ ಕೂಡಾ ಅಂಗಡಿಗಳಲ್ಲಿ ಲೂಸ್ ಮಾರಾಟ ಮಾಡತಕ್ಕದ್ದು, ಸಣ್ಣ ಮಿಲಿಲೀಟರ್‌ಗಳನ್ನು ಇಟ್ಟುಕೊಂಡು ಅನ್ಯಾಯ ಮಾಡತಕ್ಕದ್ದು ನಡೆದಿದೆ ಇದರ ಉದ್ದೇಶ ಏನು ? ಇದರಿಂದ ಬಳಕೆದಾರರಿಗೆ, ಸರಕಾರಕ್ಕೆ ವಂಚನೆಯಾಗುವುದಿಲ್ಲವೇ, ಇದಕ್ಕೆ ಯಾರು ಕಾರಣ ಎಂದು ಕೇಳುವುದಕ್ಕೆ ಇಚ್ಛಿಪಡುತ್ತೇನೆ ? ಆದರ ಜೊತೆಯಲ್ಲೇ ಈಗ ಸೀಸೆಗಳನ್ನು ಒಗಿಸಿದೇ ಇದ್ದ ಸಂದರ್ಭದಲ್ಲಿ. ಆಗುವ ಲುಕ್ಸಾನಿಗೆ. ಅದು ಸರಕಾರಕ್ಕೆ ಇರಬಹುದು, ಕಂಟ್ರಾಕ್ಟರಿಗೇ ಇರಬಹುದು. ಅಥವಾ ಬಳಕೆದಾರರಿಗೇ ಇರಬಹುದು. ಇದಕ್ಕೆ ಯಾರು ಹೊಣೆ ಯಾವ ಕಾರಣಕ್ಕೆ ಇದನ್ನು ಮಾಡಿದರು ಎಂದು ಕೇಳುತ್ತೇನೆ.

ಶ್ರೀ ರಮೇಶ್ ಚಂದಪ್ಪ ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಸಾರಾಯಿಯನ್ನು ಲೂಸಾಗಿ ಮೆಂಡರ್ ಅಂಗಡಿಯಲ್ಲಿ ಮಾರುತ್ತಿದ್ದಾರೆ. ಸರಕಾರ ಈ ರೀತಿ ಮಾರುವುದಕ್ಕೆ ಅವಕಾಶ ಮಾಡಿಕೊಟ್ಟಿದೆ ಎಂಬ ಭಾವನೆಯಿಂದ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಅಂತಹ ಯಾವ ಆಜ್ಞೆಗಳನ್ನೂ ನಾವು ಹೊರಡಿಸಿಲ್ಲ. ಆದರೆ ಕೆಲವು ಕಂಟ್ರಾಕ್ಟರ್ಸ್, ವೆಂಡರ್ಸ್ ಇಂತಹದನ್ನು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ನನ್ನ ಗಮನಕ್ಕೆ ಬಂದಿದೆ. ಅಂತಹ ಕೆಲವು ಉದಾಹರಣೆಗಳನ್ನು ನಾನು ನೋಡಿರುತ್ತೇನೆ. ಸೀಸೆಗಳಲ್ಲಿ ತುಂಬಿ ಮಾರುವುದನ್ನು ಇಂಟ್ರಡ್ಯೂಸ್ ಮಾಡಿ ಒಂದು ಶಿಂಗಳಾಯಿತು. ಬಹಳ ಬೇಗ ಇದನ್ನು ತಡೆಗಟ್ಟಲಿಕ್ಕೆ ಸಂಪೂರ್ಣ ಪ್ರಯತ್ನ ಮಾಡುತ್ತೇನೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಬಿ. ಸ್ವಾಮಿರಾವ್ —ನಮ್ಮ ಪ್ರಶ್ನೆ ಬೇರೆ, ಅವರು ಹೇಳುತ್ತಿರುವುದೇ ಬೇರೆ, ಈ ನೋಟಿಫಿಕೇಷನ್ ಪ್ರಕಾರ ಅಂಗಡಿಗಳಲ್ಲಿ ಅಳತೆ ಮಾಡುವ ಉಪಕರಣಗಳನ್ನು ಇಡಬೇಕೆಂದು ಇದೆ. ಸೀಸೆಗಳಲ್ಲಿ ಮಾರಿದ ಮೇಲೆ ಅದು ಏತಕ್ಕೆ ?

ಶ್ರೀ ರಮೇಶ್ ಜಿಗಜಿಣಗಿ.— ಮಾನ್ಯ ಅಧ್ಯಕ್ಷರೇ ನನ್ನ ಹೇಳಿಕೆಯನ್ನು ಈಗಾಗಲೇ ಸಭೆಗೆ ಹೇಳಿದ್ದೇನೆ. ಅಂತಹ ಯಾವುದೇ ಆಜ್ಞೆ ನಾವು ಹೊರಡಿಸಿಲ್ಲ. ಸಂಪೂರ್ಣವಾಗಿ ಸೀಲ್ ಮಾಡಿದ ಬಾಟಲ್‌ಗಳಲ್ಲಿ ಮಾರಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಲೂಸಾಗಿ ಮಾರಿ ಎಂದು ಎಲ್ಲೂ ನಾವು ಹೇಳಿಲ್ಲ. ಅವರಿಗೆ ಲೂಸ್ ಮಾರಲು ಇಡಿ ಎಂದೂ ಹೇಳಿಲ್ಲ.

ಶ್ರೀ ಕೆ. ವಿ. ರವೀಂದ್ರನಾಥಬಾಬು —ಲೂಸ್ ಆಗಿ ಮಾರಬೇಕೆಂದು ಹೇಳಿಲ್ಲ. ಆದರೆ ಗೆಜೆಟ್ ನೋಟಿಫಿಕೇಷನ್ ಪ್ರಕಾರ Metric measure and weights should be used ಎಂದು ಇದೆ. ಇದರ ಅರ್ಥ ಏನು ? ಬಾಟಲ್‌ಗಳಲ್ಲಿ ಮಾರಲಿಕ್ಕೆ ಹೇಳಿದ್ದೀರಿ ಹಾಗಾದರೆ ಮೆಟ್ರಿಕ್ ವೇಟ್ಸ್ ಅಂಡ್ ಮೇಜರ್ಸ್ ಇಡುವುದಕ್ಕೆ ಏತಕ್ಕೆ ಹೇಳಿದ್ದೀರಿ ?

ಶ್ರೀ ರಮೇಶ್ ಚಂದಪ್ಪ ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಈ ನೋಟಿಫಿಕೇಷನ್‌ನಲ್ಲಿ ಒಂದೆ ವಿಚಾರವನ್ನು ಮಾಡಿರುತ್ತೇವೆ. ಕೆಲವೊಂದು ಪ್ರಸಂಗದಲ್ಲಿ ನ್ಯೂನತೆಗಳು ಉಂಟಾಗಿ, ಸ್ಪೈಕ್‌ಗಳಾಗಿ

ಬಾಟಲ್ ಯೂನಿಟ್‌ಗಳು ಬಂದ್ ಆದಾಗ, ಬಾಟಲ್ ಯೂನಿಟ್‌ಗಳಿಂದ ಸಪ್ಲೈ ಆಗದೇ ಇದ್ದಾಗ, ಅಂತಹ ಸಮಯದಲ್ಲಿ ಮಾತ್ರ ಉಪಯೋಗ ಮಾಡಿಕೊಳ್ಳುವುದಕ್ಕೆ ಇಟ್ಟಿರಬೇಕೆಂದು ಹೇಳಿರುವುದು ನಿಜ.

ಶ್ರೀ ಕೆ. ವಿ. ರವೀಂದ್ರನಾಥಬಾಬು — ಮಾನ್ಯ ಅಧ್ಯಕ್ಷರೇ, ೧೦೦ ಎಂ. ಎಲ್. ಬಾಟಲ್ ಸಪ್ಲೈ ಆಗುತ್ತಿಲ್ಲ, ಎಲ್ಲೂ ಆಗುತ್ತಿಲ್ಲ, ಅದಕ್ಕೆ ಏನು ಮಾಡುತ್ತೀರಿ ? ಹೆಚ್ಚಾಗಿ ಮಾರಾಟವಾಗುವುದು ಬಡವರು ಉಪಯೋಗಿಸುವುದು ೧೦೦ ಎಂ.ಎಲ್.ನಲ್ಲಿ ಸರಕಾರದಿಂದ ಇದು ಸಪ್ಲೈ ಆಗುತ್ತಿಲ್ಲ ಎಂದ ಮೇಲೆ ಲೂಸ್ ಆಗಿ ಮಾರಾಟ ಮಾಡುವುದಕ್ಕೆ ಪರ್ಮಿಷನ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ರಮೇಶ್ ಚಂದಪ್ಪ ಜಿಗಜಿಣಗಿ.— ಮಾನ್ಯ ಅಧ್ಯಕ್ಷರೇ ೧೦೦ ಎಂ. ಎಲ್. ಬಾಟಲ್ ಸರಬರಾಜು ಸಂಪೂರ್ಣವಾಗಿ ನಿಂತು ಹೋಗಿಲ್ಲ. ಕೆಲವು ಕಡೆ ನಿಂತು ಹೋಗಿರುವುದು ನನ್ನ ಗಮನಕ್ಕೆ ಬಂದಿದೆ. ಎಲ್ಲಾ ಕಡೆಯಲ್ಲೂ ಇಲ್ಲ ಎಂದು ಅಲ್ಲ. ಕೆಲವು ಜನ ಗುತ್ತೆದಾರರು ನನ್ನ ಹತ್ತಿರ ಬಂದು ೧೦೦ ಎಂ. ಎಲ್. ೨೦೦ ಎಂ. ಎಲ್. ೮೦ ಎಂ. ಎಲ್. ಬಾಟಲ್‌ಗಳ ಸರಬರಾಜು ಇಲ್ಲ ಎಂದು ದೂರಿದರು. ನಾನು ಖುದ್ದಾಗಿ ಶುಕ್ರವಾರ ಬಾಟಲಿಂಗ್ ಯೂನಿಟ್‌ಗೆ ಭೇಟಿ ನೀಡಿದೆ. ಗುತ್ತಿಗೆದಾರರು ಪೇಟೆಯಲ್ಲಿ ಬಾಟಲ್‌ಗಳು ಇಲ್ಲ ಎಂದು ಹೇಳುತ್ತಿದ್ದರು. ನಾನು ಹೋಗಿ ನೋಡಿದಾಗ ಹೆಚ್ಚಿನ ಪ್ರಮಾಣದಲ್ಲಿ ಬಾಟಲ್‌ಗಳು ಇದ್ದವು, ಆದರೆ ಸ್ವಲ್ಪ ಪ್ರಮಾಣದಲ್ಲಿ ತೊಂದರೆಯಾಗಿದೆ ಎನ್ನುವುದು ನಿಜ. ಇದನ್ನು ಬೇಗ ಸರಿಪಡಿಸಲು ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಒಂದೇ ಒಂದು ವಿಚಾರ ಹೇಳುತ್ತಿದ್ದೇನೆ. ಲೂಸಾಗಿ ಮಾರುವುದಕ್ಕೆ ಪರ್ಮಿಷನ್ ಕೊಡುತ್ತೀರಾ ಎಂದು ಕೇಳುತ್ತಿದ್ದಾರೆ, ಇದರಿಂದ ಸರಕಾರ ಏನು ಉದ್ದೇಶ ಹೊಂದಿದೆ ಅದು ಸಫಲವಾಗುವುದಿಲ್ಲ. ಜನರಿಗೆ ಒಳ್ಳೆಯ ಸಾರಾಯಿಯನ್ನು ಕೊಡಬೇಕೆಂಬ ಉದ್ದೇಶದಿಂದ ಈ ಮಹತ್ವದ ನಿರ್ಣಯವನ್ನು ನಾವು ತೆಗೆದುಕೊಂಡಿದ್ದೇವೆ. ಲೂಸ್ ಮಾರುವುದಕ್ಕೆ ಪರ್ಮಿಷನ್ ಕೊಡುತ್ತೀರಾ ಎಂದು ಕೇಳುತ್ತಿದ್ದಾರೆ. ಆದರೆ ಅದು ಸಾಧ್ಯವಾಗುವುದಿಲ್ಲ ಎಂದು ಮಾನ್ಯ ಸದಸ್ಯರಿಗೆ ಹೇಳುತ್ತಿದ್ದೇನೆ. ೧೦೦ ಎಂ ಎಲ್, ಬಾಟಲನ್ನು ಸಾಕಷ್ಟು ಪ್ರಮಾಣದಲ್ಲಿ ಮಾರುಕಟ್ಟೆಗೆ ಒದಗಿಸುವ ವ್ಯವಸ್ಥೆಗೆ ಸಂಪೂರ್ಣ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸಾರಾಯಿ ಒಳಗೆ ಒಳ್ಳೆಯ ಸಾರಾಯಿಯಾವುದು.

ಶ್ರೀ ಎಂ. ರಘುಪತಿ.—ಸಾರಾಯಿ ಎನ್ನುವುದೇ ಕೆಟ್ಟದ್ದು, ಒಳ್ಳೆಯದು ಯಾವುದು, ಕೆಟ್ಟದ್ದು ಯಾವುದು ?

ಶ್ರೀ ಕೆ ಹೆಚ್. ಶ್ರೀನಿವಾಸ್.—ಎಷ್ಟು ಕುಡಿದರೂ ಇನ್ನಷ್ಟು ಬೇಕೆನಿಸುವುದು ಕೆಟ್ಟದ್ದು, ಸ್ವಲ್ಪ ಕುಡಿದರೂ ಸಾಕು ಎನಿಸುವುದು ಒಳ್ಳೆಯದು.

ಶ್ರೀ ಎಂ. ರಘುಪತಿ.—ಅದರ ಅನುಭವ ನಮಗೆ ಯಾವುದೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ.— ಒಳ್ಳೆಯದು ಯಾವುದು ಕೆಟ್ಟದ್ದು ಯಾವುದು ಎಂಬುದನ್ನು ನೀವು ತೀರ್ಮಾನ ಮಾಡಿ ಕಳುಹಿಸಿಕೊಡಿ. ಬಾಟಲಿಂಗ್ ಕಂಟ್ರಾಕ್ಟ್ ಕೊಟ್ಟಿರತಕ್ಕದ್ದು ಲೂಸ್ ಆದರೆ ಮೋಸ ಮಾಡುತ್ತಾರೆ, ಮಿಕ್ಸ್ ಮಾಡುತ್ತಾರೆ, ಇತ್ಯಾದಿ ಕಾರಣಗಳಿಗಾಗಿ ತಾವು ಮಾಡಿರುತ್ತೀರಿ ಅದು ಸರಿಯೋ ತಪ್ಪೋ ಎಂಬುದನ್ನು ಇಲಾಖೆಯ ಬೇಡಿಕೆ ಚರ್ಚೆ ಬಂದಾಗ ಬಹಳ ವಿವರವಾಗಿ ಹೋಗಬೇಕೆಂಬ ಉದ್ದೇಶ ಇದೆ. ಆಗ ಅದನ್ನು ತೆಗೆದುಕೊಳ್ಳೋಣ. ಈಗ ಮಾನ್ಯ ಸದಸ್ಯರ ಪ್ರಶ್ನೆ ಇರತಕ್ಕಂಥಾದ್ದು ಬಾಟ್ಲಿಂಗ್ ಕಂಟ್ರಾಕ್ಟ್ ಕೊಟ್ಟಮೇಲೆ, ಅದಕ್ಕೆ ಸರಿಯಾದ ವ್ಯವಸ್ಥೆಯನ್ನು ನೀವು ಮಾಡಬೇಕು. ನೀವು ವ್ಯವಸ್ಥೆ ಮಾಡದಿದ್ದರೆ ಬಾಟಲ್ ಸಿಗುವುದಿಲ್ಲ. ಆಗ ಏನು ಮಾಡುತ್ತಾರೆ ಎಂದರೆ, ಲೂಸ್ ಕೊಡುವುದು ಅನಿವಾರ್ಯವಾಗುತ್ತದೆ. ಕಸ್ಟಮರ್ಸ್ ಗಲಾಟೆ ಮಾಡಬಹುದು. ಸರಿಯಾಗಿ ಬಾಟ್ಲಿಂಗ್ ಕೊಡದೇ ಇದ್ದರೆ, ಸೀಲ್ಡ್ ಬಾಟಲ್ ಸಪ್ಲೈ ಮಾಡದಿದ್ದರೆ, ಲೂಸ್ ಮಾರಾಟ ಮಾಡುವುದಕ್ಕೆ ಅವಕಾಶ ಇದೆ ಎಂಬುದನ್ನು ಒಪ್ಪೋಣ. ಬಾಟಲ್ ಸರಿಯಾಗಿ ಸಪ್ಲೈ ಮಾಡದಿದ್ದರೆ ಸೀಲ್ಡ್ ಬಾಟಲ್ ಸಪ್ಲೈ ಮಾಡದಿದ್ದರೆ. ಲೂಸ್‌ನಲ್ಲಿ ಮಾರಾಟ ಮಾಡಬಹುದು ಅದು ಸರಿಯೇ ?

ಶ್ರೀ ರಮೇಶ್ ಚಂದಪ್ಪ ಜಿಗಜಿಣಗಿ.—ನಾವು ಗೆಜೆಟ್ ನೋಟಿಫಿಕೇಷನ್ ಮಾಡಿದ್ದು ೧೦೦, ೧೭೦ ಎಂ.ಎಲ್ ಮಿಲಿಲೀಟರ್ ಬಾಟಲ್‌ಗಳು ಇಲ್ಲದೇ ಇದ್ದಾಗ ಮಾತ್ರ ಲೂಸ್‌ನಲ್ಲಿ ಸಪ್ಲೈ ಮಾಡಬೇಕೆಂದು

ಇದೆ ಆ ರೀತಿ ಆದರಲ್ಲಿ ಮೆನ್‌ಷನ್ ಮಾಡಿಲ್ಲ. ಆದರೆ ಈಗ ಏನು ತೊಂದರೆಯಾಗುತ್ತಿದೆ ಎಂಬುದನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದನ್ನು ಬಹಳ ಬೇಗ ಸರಿಪಡಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ ಲೂಸ್ ಮಾರಾಟ ಮಾಡಲಿಕ್ಕೆ ಮಾತ್ರ ಅವಕಾಶ ಕೊಡುವುದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ, ಸೀಲ್ ಮಾಡಿದ ಬಾಟಲ್‌ಗಳನ್ನು ಕಳುಹಿಸುತ್ತೇವೆಂದು ಹೇಳಿದರು. ನನಗೆ ೧೦೦ ಎಂ.ಎಲ್ ೧೫೦ ಎಂ.ಎಲ್. ೨೦೦ ಎಂ.ಎಲ್. ಯಾವುದೂ ಗೊತ್ತಿಲ್ಲ. ಸೀಲ್ಡ್ ಬಾಟಲ್ ಸಪ್ಲೈ ಆಗಿದ್ದರೆ, ಮೆಟ್ರಿಕ್ ಮೆಸರ್ಸ್ ವಿಚಾರ ಪ್ರಸ್ತಾಪ ಮಾಡತಕ್ಕಂಥಾದ್ದು ಏನೂ ಇರಲಿಲ್ಲ. ಸೀಲ್ಡ್ ಬಾಟಲ್ ಸಪ್ಲೈ ಆಗದೆ ಇರುವುದರಿಂದ ಮೆಟ್ರಿಕ್ ಮೆಸರ್ಸ್ ಅಥವಾ ಲೂಸ್ ಮಾರಾಟ ವಿಚಾರ ಪ್ರಸ್ತಾಪ ಮಾಡಬೇಕಾಗಿ ಬಂದಿದೆ,

ಒಬ್ಬ ಸದಸ್ಯರು.—ವೆಂಡರ್ಸ್ ಕದಿಯುತ್ತಾರೆ ಎನ್ನುವ ದೃಷ್ಟಿಯಿಂದ ಹಾಗೂ ಗ್ರಾಹಕರಿಗೆ ಒಳ್ಳೆಯದಾಗಲಿ ಎನ್ನುವ ದೃಷ್ಟಿಯಿಂದ ಮೆಟ್ರಿಕ್ ಮೆಸರ್ಸ್ ಇಡುವ ವ್ಯವಸ್ಥೆ ಮಾಡಿದೆ.

ಶ್ರೀ ರಮೇಶ್ ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಗೆಜೆಟ್ ನೋಟಿಫಿಕೇಷನ್ ಮಾಡಿದ್ದಾದು ನಿಜ. ಲೂಸ್ ಮಾರಿ ಎಂದು ಗೆಜೆಟ್ ನೋಟಿಫಿಕೇಷನ್ ಮಾಡಿಲ್ಲ. ಬಾಟಲಿಂಗ್ ಯೂನಿಟ್‌ಗಳು ಆಕಸ್ಮಿಕವಾಗಿ ಬಂದ್ ಆದರೆ, ಅಲ್ಲಿ ಸ್ಟ್ರೈಕ್ ಆದರೆ, ಏನಾದರೂ ಅಲ್ಲಿ ಅಡಚಣೆ ಉಂಟಾದರೆ ಮೆಟ್ರಿಕ್ ಮೆಸರ್ಸ್ ಅನ್ನು ಇಡಬೇಕೂ ಎನ್ನುವ ಅಭಿಪ್ರಾಯವನ್ನು ತಿಳಿಸುತ್ತೇನೆ.

ಶ್ರೀ ಬಿ. ಸ್ವಾಮಿರಾವ್.— ಮಾನ್ಯ ಅಧ್ಯಕ್ಷರೇ, ಲೂಸ್ ಮಾರಾಟ ಮಾಡಲು ಗೆಜೆಟ್ ನೋಟಿಫಿಕೇಷನ್ ಆಗಿಲ್ಲ ಎಂದು ಹೇಳಿದ್ದಾರೆ ಮೆಟ್ರಿಕ್ ಮೆಸರ್ಸ್ ಇಡಬೇಕೆಂದೂ ಹೇಳಿದ್ದಾರೆ, ಇದರ ಉದ್ದೇಶ ಏನೆಂದು ಕೇಳುತ್ತಿದ್ದೇನೆ.

ಶ್ರೀ ಬಿ. ರತ್ನಾಕರ್.—ಇದರಲ್ಲಿ ಮೂಲಭೂತವಾದ ಪ್ರಶ್ನೆ ಏನೆಂದರೆ, ಸ್ವಾಮಿರಾವ್, ರವೀಂದ್ರನಾಥಬಾಬು ಅವರು ಏನು ಮಂಡಿಸಿದ್ದಾರೆ. ಅದರಂತೆ ೧೦೦ ಎಂ.ಎಲ್. ಸಾರಾಯಿ ಕುಡಿಯಬೇಕಾದರೂ ಬಾಟಲ್ ಸಿಸ್ಟಂ ಸರಿಯಾಗಿ ಇಲ್ಲ. ಕ್ವಾರ್ಟರ್‌ನಲ್ಲಿ ಕುಡಿಯಬೇಕಾಗುತ್ತದೆ. ೬೦ ಎಂ.ಎಲ್. ಬೇಕೆಂದರೆ ೧೦೦ ಎಂ.ಎಲ್ ಬಾಟಲ್ ಒಡೆದು ಕೊಡಬೇಕಾಗುತ್ತದೆ. ಬಾಟಲ್ ಒಡೆದು ಕೊಡಬೇಡಿ ಎಂದು ಸರ್ಕಾರದವರು ಹೇಳುತ್ತಾರೆ. ಗ್ರಾಮೀಣ ಜನರು ಒಂದು ಬಾಟಲ್‌ಗೆ ೮ ರೂಪಾಯಿ ಕೊಟ್ಟು ಕುಡಿಯಬೇಕಾಗುತ್ತದೆ. ಅವರಿಗೆ ಆ ಶಕ್ತಿ ಇರುವುದಿಲ್ಲ. ಆದುದರಿಂದ ಬಾಟಲ್ ಒಡೆದು ಕೊಡುವುದಿಲ್ಲ ಎಂದರೆ ಹೇಗೆ ?

(ಗೊಂದಲ)

(೪-೫೫ ಜನ ಸದಸ್ಯರು ಒಟ್ಟಿಗೆ ನಿಂತು ಮಾತನಾಡಲಾರಂಭಿಸಿದರು)

ಶ್ರೀ ರಮೇಶ್ ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ. ತಮ್ಮ ಮಂತ್ರಾಂತರ ಎಲ್ಲಾ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ನನ್ನ ಇಲಾಖೆಯ ಬಗ್ಗೆ ಆಯವ್ಯಯದ ಚರ್ಚೆಯಲ್ಲಿ ಏನೇ ತಾರೀಖಿ ಬರಂತ್ತದೆ. ಈ ವಿಚಾರದಲ್ಲಿ ಇನ್ನೂ ಹೆಚ್ಚಿನ ವಿವರ ಬೇಕಾದರೆ ಆಗ ಹೇಳುತ್ತೇನೆ. ಇವೊತ್ತು ನಾನು ಸವಿಸ್ತಾರವಾಗಿ ಹೇಳಿಕೆಯನ್ನು ನೀಡಿದ್ದೇನೆ. ಇದನ್ನು ಇಲ್ಲಿಗೆ ಬಿಟ್ಟುಬಿಡೋಣ ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ —ಸ್ವಾಮಿ, ನಾನು ಮಾನ್ಯ ವಿ. ಎಲ್. ಪಾಟೀಲರನು ಎರಡು ಗಂಟೆಯಿಂದ ಕಾಯುತ್ತಿದ್ದೇನೆ. ಊಟ ಮಾಡಿಲ್ಲ, ಅವರಿಗೋಸ್ಕರ ಕಾಯುತ್ತೇನೆ.

ಶ್ರೀ ಎಂ ರಘುಪತಿ.—ಅವರು ಕೌನ್ಸಿಲ್‌ನಲ್ಲಿ ಇದ್ದಾರೆ

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಪತಿಗಳೇ, ತಮ್ಮ ಅನುಮತಿಯನ್ನು ಪಡೆದು ಸದನದ ಕಲಾಪಗಳ ನಿಯಮಾವಳಿ ೫೯ರ ಪ್ರಕಾರ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ಆದ ಕೂಡಲೇ ಅದನ್ನು ಎತ್ತಬೇಕು.

ಶ್ರೀ ಎಸ್. ಬಂಗಾರಪ್ಪ.—ಲೆಜಿಸ್ಲೇಚರ್ ಬಿಸಿನೆಸ್ ಬರತಕ್ಕಂಥಾದ್ದು ಈ ಕಲಾಪಗಳ ಆದವೇಲೆಯೇ.

ಅಧ್ಯಕ್ಷರು.—ಪ್ರಶ್ನೋತ್ತರ ಮುಗಿದ ತಕ್ಷಣ ಬರುತ್ತದೆ, ಜೊತೆಗೆ ನೀವು ನಾಳೆ ಇದನ್ನು ತರುತ್ತೀರೆಂದು ತಿಳಿದುಕೊಂಡಿದ್ದೆ.

ಶಾಸಕಾಂಗದ ಕಾರ್ಯಕಲಾಪಗಳು

ವಿಧೇಯಂಕಗಳ ಮಂಡನೆ

(೧) ೧೯೮೫ನೇ ಇಸವಿಯ ರಾಜ್ಯದ ಬಳಕೆ, ಉಪಯೋಗ ಹಾಗೂ ಮಾರಾಟಕ್ಕಾಗಿ ಸ್ಥಳೀಯ ಪ್ರದೇಶದೊಳಗೆ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕ.

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಮುಖ್ಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ೧೯೮೫ನೇ ಇಸವಿಯ ರಾಜ್ಯದ ಬಳಕೆ, ಉಪಯೋಗ ಹಾಗೂ ಮಾರಾಟಕ್ಕಾಗಿ ಸ್ಥಳೀಯ ಪ್ರದೇಶದೊಳಗೆ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ, ೧೯೮೫ನೇ ಇಸವಿಯ ರಾಜ್ಯದಬಳಕೆ, ಉಪಯೋಗ ಹಾಗೂ ಮಾರಾಟಕ್ಕಾಗಿ ಸ್ಥಳೀಯ ಪ್ರದೇಶದೊಳಗೆ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಡನೆಗೆ ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು) —ಮುಖ್ಯ ಮಂತ್ರಿಗಳ ಪರವಾಗಿ, ಮಾನ್ಯ ಅಧ್ಯಕ್ಷರೇ, ೧೯೮೫ನೇ ಇಸವಿಯ ರಾಜ್ಯದ ಬಳಕೆ, ಉಪಯೋಗ ಹಾಗೂ ಮಾರಾಟಕ್ಕಾಗಿ ಸ್ಥಳೀಯ ಪ್ರದೇಶದೊಳಗೆ ಬರುವ ಸರಕುಗಳ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನು ಮಂಡಿಸಲಾಗಿದೆ.

(೨) ೧೯೮೫ನೇ ಇಸವಿಯ ಕರ್ನಾಟಕ ವೃತ್ತಿ, ವ್ಯಾಪಾರ, ಕಸಬು ಹಾಗೂ ಉದ್ಯೋಗಗಳಿಗೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕ.

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ, ೧೯೮೫ನೇ ಇಸವಿಯ ಕರ್ನಾಟಕ ವೃತ್ತಿ, ವ್ಯಾಪಾರ, ಕಸಬು ಹಾಗೂ ಉದ್ಯೋಗಗಳಿಗೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ೧೯೮೫ನೇ ಇಸವಿಯ ಕರ್ನಾಟಕ ವೃತ್ತಿ, ವ್ಯಾಪಾರ, ಕಸಬು ಹಾಗೂ ಉದ್ಯೋಗಗಳಿಗೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ೧೯೮೫ನೇ ಇಸವಿಯ ಕರ್ನಾಟಕ ವೃತ್ತಿ, ವ್ಯಾಪಾರ, ಕಸಬು ಹಾಗೂ ಉದ್ಯೋಗಗಳಿಗೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

* ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ.